## ತುಮಕೂರು ಡಿಸ್ಟ್ರಿಕ್ಟ್ ಡಿ॥ ಕಮ್ಮಿಷನರ್ ಕೋರ್ಟಿನಿಂದ.

ತಾರೀಖು 26ನೇ ಮೇ 1885.

ಇದರಿಂದ ಸಮಸ್ತರಿಗೂ ತಿಳಿಸುವದೇನಂದರೆ, ಡಿ॥ ಮ॥ ಮದ್ದಗಿರಿ, ಪಾವಗಡ, ಪೆರಾ, ಗುಬ್ಬಿ, ತಿಪಟೂರು, ತುಮಕೂರು ಈ ತಾಲ್ಲೂಕುಗಳಲ್ಲಿ ಸ೯ 1885—86ನೇ ಪಾರ್ಥಿವ ಸಂವತ್ಸರದಲ್ಲಿ, ಸರ್ಕಾರದ ಜಮೀನಿನಲ್ಲಿ ಕುರಂಗದ ಕಲ್ಲುಗಳನ್ನು ಜಮಾಯಿಸತಕ್ಕ ಹಕ್ಕನ್ನು ಆಯಾ ತಾಲ್ಲೂಕು ಆಮಿಲರ ರೂಬರೂ ತಾಲ್ಲೂಕು ಕಚ್ಚೇರಿಯಲ್ಲಿ ಇದರಡಿಲಿ ಕಂಡ ತಾರೀಖುಗಳಲ್ಲಿ, ದಿವಿ 11 ಘಂಟೆ ಲಾಗಾಯಿತು ಹರಾಜು ಮಾಡಲಾಧೀತು.

### ಷರತ್ತುಗಳು.

I. ಹರಾಜು ಖೈದಾದ ಕೂಡ್ಲೆ ಆಪ್ಕೆರು ಸವಾಲುದಾರನು ಕೇಕಡಾ 25 ರೂಪಾಯಿ ವೇರಿಗೆ ನಗದು ಶೇವಣೀಯನ್ನು ಇಡಬೇಕು, ಹರಾಜು ದಿವಾಸಾಹೆಬರಿಂದ ಮಂಜೂರಾದ ವಡನೆ, 15 ದಿವಸದಲ್ಲಿ ಪೂರಾ ಮೊಬಲಗನ್ನು ಹಾಜರ್ಮಾಡಬೇಕು, ಹಾಗೆ ಮಾಡದೆ ತಪ್ಪಿದರೆ, ಪುನಹ ಹರಾಜು ಮಾಡಲ್ಪಟ್ಟು ನಷ್ಟವಂದ ಮೊಬಲಗಿಗೆ ಮೊದಲಿನ ಚಡಸವಾಲುದಾರನನ್ನು ಗುರಿಮಾಡಲಾಧೀತು ಮತ್ತು ಶೇವಣೀಯನ್ನು ಸರ್ಕಾರಕ್ಕೆ ಶೀರಿಸಿಕೊಳ್ಳಲಾಧೀತು.

2. ಕುರಂಗದಕಲ್ಲುಗಳನ್ನು ತೆಗಿಯುವ ವುದ್ದಿಕ್ಯ ಭೂಮಿ ಸಾಗುವಳೀಗೆ ನಾಲಾಯಕಾಗುವಂತೆ ಮಾಡಕೂಡದು, ಗುಂಡಿಗಳನ್ನು ಇಜಾರೆದಾರನೇ ಮುಚ್ಚಿಸಬೇಕು.

3. ಹಿಡುವಳಿಯಲ್ಲಿರುವ ಭೂಮಿಯಲ್ಲಿ ಕುರಂಕದ ಕಲ್ಲುಗಳನ್ನು ಹಿಡುವಳಿದಾರನ ಅನುಮತಿ ಪಡದು ತೆಗದುಕೊಳ್ಳಬೇಕು.

4. ಬಂಜರು ಭೂಮಿಗಳನ್ನು ಹುಲ್ಲುಬನ್ನಿ ಮತ್ತು ಸಾಗುವಳೀಗೆ ಕೊಡಲಾಧೀತು, ಹಾಗೆ ಕೊಡೋಣದರಿಂದ ಕುರಂಗದ ಕಲ್ಲು ಇಜಾರೇದಾರನಿಗೇನಾದರೂ ನಷ್ಟವಾದರೆ ಅದಕ್ಕೆ ಸರ್ಕಾರದವರು ಜವಾಬ್ದಾರರಲ್ಲ.

5. ಹರಾಜು ಮೊಬಲಗಿನ ಮೇಲೆ ಕೇಕಡಾ 6—4—0 ರೂಪಾಯಿ ವೇರಿಗೆ ಲೊಕಲ್ ಫಂಡನ್ನು ಕೊಡಬೇಕು.

ಈ ವಿಷಯದಲ್ಲಿ ಮತ್ತೇನಾದರೂ ತಪೇಲು ತಿಳಿಯಬೇಕಾಗಿದ್ದರೆ, ಆಯಾ ತಾಲ್ಲೂಕು ಆಮಿಲರಿಗೆ ಬರದು ತಿಳಕ್ಕೊಳ್ಳಬಹುದು.

### ಹರಾಜು ತಾರೀಖು.

| | | |
|---|---|---|
| ಮದ್ದಗಿರೀ ತಾಲ್ಲೂಕು | ಸ೯ 1885ನೇ ಜುಲೈ | 15 |
| ಪಾವಗಡ ತಾಲ್ಲೂಕು | ಡಿಟೋ | 26 |
| ಪೆರಾ ತಾಲ್ಲೂಕು | ಡಿಟೋ | 25 |
| ಗುಬ್ಬಿ ತಾಲ್ಲೂಕು | ಡಿಟೋ | 28 |
| ತಿಪಟೂರು ತಾಲ್ಲೂಕು | ಡಿಟೋ | 30 |
| ತುಮಕೂರು ತಾಲ್ಲೂಕು | ಡಿಟೋ | 27 |

ಪಿ. ಯ್ಯರ್. ಕೃಷ್ಣಮೂರ್ತಿ,
ಡೆಪ್ಯುಟಿ ಕಮ್ಮಿಷನರ್.

## ಮೈಸೂರು ಡಿಸ್ಟ್ರಿಕ್ಟ್.

### ಮೈಸೂರು ಡಿಸ್ಟ್ರಿಕ್ಟ್ ಜಡ್ಜ್ರೀಯವರ ಕೋರ್ಟಿನಲ್ಲಿ.

1885ನೇ ಇಸವಿ ಆರ್ಜೀ ನಂಬರ್ 122.

ವೃತಪಟ್ಟ ಜೇಳೂರು ವೆಂಕಟನಾರಣಪ್ಪನವರ ಆಸ್ತಿ ವಿಷಯದಲ್ಲಿ—

ಅರ್ಜೀದಾರ್ರು ಚಾಮರಾಜನಗರದ ಕಸಬಾದಲ್ಲಿರುವ ಗವರ್ಮೆಂಟ್ ಸ್ಕೂಲ್ ಅಸಿಸ್ಟೆಂಟ್ ಮಾಸ್ಟರ್ ವೆಂಕಟಕೃಷ್ಣಪ್ಪ ವೃತಪಟ್ಟ ಸದರೀ ವೆಂಕಟನಾರಣಪ್ಪನವರಿಗೆ ತಮ್ಮ ಆಗಬೇಕೆಂಬ ಹಕ್ಕುದಾರೀ ಮೇಲೆ ಚಾಮರಾಜನಗರ ಕಸಬಾ ಸ್ಥಳದ ಸದರೀ ವೆಂಕಟ್ಟಕೃಷ್ಣಪ್ಪನವರು, ಸದರೀ ಸ್ಥಳದ ವಾಸಸ್ಥರಾಗಿ, ವೃತಪಟ್ಟ ವೆಂಕಟನಾರಣಪ್ಪನವರ ಜೀವದಗಿ ಬ್ಯಾಗಿ ಬರತಕ್ಕ 800 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಅಕ್ಟು ವೇರಿಗೆ ಸರಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಐಯಿಷ್ ಮಾಡಿರುತ್ತಾರ.